ಮಾಡುತ್ತಾ ಹೋದಾಗ ಮತ್ತು ಆ ಪ್ರಾಜೆಕ್ಟ್‌ಗಳಲ್ಲಿ ಮೂಲ ಅಂದಾಜನ್ನು ಇನ್‌ವೆಸ್ಟಿಗೇಷನ್ ಮಾಡ ತಕ್ಕಂಥ ಕಾಲದಲ್ಲಿ ತಾಂತ್ರಿಕ ನಿರ್ಣಯಗಳಾಗಿದೆ. ಆದನ್ನು ಮಾರ್ಪಾಟು ಮಾಡತಕ್ಕಂಥ ಹಲವಾರು ಕಾರಣಗಳಿಂದ ಬದಲಾಗುತ್ತದೆ ಆದುದರಿಂದ ತಮ್ಮ ಅಪ್ರಿಹೆನ್‌ಷನ್ ಏನಿದೆ ಕೆಲಸ ಆಗದೆ ದುಡ್ಡು ಹಾಳಾಗುತ್ತದೆ ಎಂದು ತಮಗೆ ಗೊತ್ತಾದರೆ ಆಂಪಲ್ ಆಪರ್ಚುನಿಟಿ ಇದೆ, ಆದರ ಮೇಲೆ ಯಾವುದೇ ರೀತಿಯ ತನಿಖೆ ನಡೆಸುವುದಕ್ಕೆ ಸಿದ್ಧ ನಿದ್ದೇನೆ. ಇವತ್ತು ಈ ಕೆಲಸಗಳು ಮುಗಿಯ ಬೇಕಾದರೆ ಇನ್ನು ೨೭೦೦ ಕೋಟಿ ರೂಪಾಯಿ ಬೇಕು ಎಂದು ಹೇಳಿದ್ದೇನೆ. ಇದು ಈಗ ಇರತಕ್ಕಂಥ ಆನ್ ಗೋಯಿಂಗ್ ವರ್ಕ್ಸ್‌ಗೆ ಮಾತ್ರ ಬಾಕಿಯದಕ್ಕೆ ಅಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಒಂದೇ ಒಂದು ಪ್ರಶ್ನೆ ಕೇಳುತ್ತೇನೆ.

ಅಧ್ಯಕ್ಷರು.—ಆಗುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಒಂದೇ ಒಂದು ಕೇಳುತ್ತೇನೆ. ಮೊದಲನೆಯ ಐಟಂ ಅಪ್ಪರ್ ಕೃಷ್ಣ ಪ್ರಾಜೆಕ್ಟ್-೧. ಅದಕ್ಕೂ ತೆಲುಗುಗಂಗಾಕ್ಕೂ ಲಿಂಕ್ ಇದೆ. ನಿನ್ನೆ ಪೇಪರಿನಲ್ಲಿ ಓದಿದ್ದೇನೆ. ಆದರಲ್ಲಿ ಕೆಲವು ಕಂಡೀಷನ್ಸ್ ಅನುಸರಿಸಿ ತೆಲುಗುಗಂಗಾಗೆ ಕ್ಲಿಯರೆನ್ಸ್ ಕೊಡುತ್ತೇವೆ ಎನ್ನುವುದು ಮೊನ್ನೆ ಪೇಪರಿನಲ್ಲಿ ಬಂದಿದೆ. ಅದು ಯಾವ ಕಂಡೀಷನ್, ಅದರಿಂದ ನಮಗೆ ತೊಂದರೆ ಏನು ಎನ್ನುವುದನ್ನು ಎಷ್ಟಾದ್ರ ಹೇಳುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಅದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಹೇಳುತ್ತೇನೆ.

ಶಿಕಾರಿಪುರ ತಾಲ್ಲೂಕಿನಲ್ಲಿ ಕಲ್ಲುವಡ್ಡು ವಿನಲ್ಲಿ ನೀರಾವರಿ ಯೋಜನೆಯನ್ನು ಕಾರ್ಯಗತ ಗೊಳಿಸುವುದು.

೨೦೦. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ, ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿಕಾರಿಪುರ ತಾಲ್ಲೂಕಿನ ಕಲ್ಲುವಡ್ಡು ನೀರಾವರಿ ಯೋಜನೆಗೆ ಸರಕಾರದವರ ಮಂಜೂರಾತಿ ದೊರೆತಿದೆಯೇ ?

ಆ) ಹಾಗಿದ್ದಲ್ಲಿ ಈಗ ಯಾವ ಹಂತದಲ್ಲಿದೆ ?

ಶ್ರೀ ಹೆಚ್. ಡಿ. ದೇವೆಗೌಡ (ಲೋಕೋಪಯೋಗಿ ಕಾಡಾ ಮಂತ್ರು ನೀರಾವರಿ ಮಂತ್ರಿಗಳು).—

ಅ) ಇಲ್ಲ.

ಆ) ಅಂದಾಜಿಗೆ ಮಂಜೂರಾತಿಯಂ ಪರಿಶೀಲನೆಯಲ್ಲಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಎಲ್ಲಾ ಪ್ರಯತ್ನ ಮಾಡುತ್ತಾ ಇದ್ದೇವೆ. ಈ ಕೆಲಸ ಮಂಜೂರಾತಿಯಾಗಿಲ್ಲ. ಪರಿಶೀಲನಾ ಹಂತದಲ್ಲಿದೆ. ಇದಕ್ಕೆ ೮ ಕೋಟಿ ೮೫ ಲಕ್ಷ ೩೫ ಸಾವಿರ ಖರ್ಚು ಮಾಡ ಬೇಕು. ಅವರೂ ನಾನೂ ಇಬ್ಬರೂ ಸ್ಥಳ ಪರಿಶೀಲನೆ ಮಾಡಿದ್ದೇವೆ. ೧೩೧೦ ಹೆಕ್ಟೇರ್ ಮುಳುಗಡೆ ಯಲ್ಲಿ ೬೪ ಎಕರೆ ಅರಣ್ಯ ಭೂಮಿ ಇದೆ. ಅರಣ್ಯ ಭೂಮಿ ಮುಳುಗಡೆ ಮಾಡತಕ್ಕಂಥಾದ್ದರ ಬಗ್ಗೆ ಕೇಂದ್ರ ಸರ್ಕಾರದ ಪರವಾನಗಿ ಬೇಕಾಗಿದೆ, ಪ್ರಯತ್ನ ನಡೆಸುತ್ತಾ ಇದ್ದೇವೆ, ಸರ್ಕಾರಕ್ಕೂ ಅಷ್ಟೇ ಕುತೂಹಲ ಇದೆ, ಆಸಕ್ತಿ ಇದೆ. ಈ ಕೆಲಸಕ್ಕೆ ಮಂಜೂರಾತಿ ಕೊಡಬೇಕು ಎಂದು ಪ್ರಯತ್ನ ಮಾಡೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರ ವಿಶೇಷ ಪ್ರಯತ್ನ ದಿಂದಾಗಿ ಈ ಯೋಜನೆಗೆ ಮತ್ತೆ ಜೀವ ಬಂದಿದೆ. ನಾನು ತಮ್ಮಲ್ಲಿ ನೇರವಾಗಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಬಹುಶಃ ಶಿಕಾರಿಪುರ ತಾಲ್ಲೂಕಿನಲ್ಲಿ ರೈತಾಪಿ ಜನರಿಗೆ ಇನ್ನಾವುದೇ ಯೋಜನೆ ಮಾಡಲಿಕ್ಕೆ ಸಾಧ್ಯವಿಲ್ಲ. ಈ ವರ್ಷವಾದರೂ ಅರಣ್ಯ ಇಲಾಖೆಯಿಂದ ಅನುಮತಿ ತೆಗೆದುಕೊಂಡು ಕೆಲಸ ಪ್ರಾರಂಭ ಮಾಡುತ್ತೀರಾ, ಇದರ ಬಗ್ಗೆ ಸ್ಪಷ ವಾಗಿ ಉತ್ತರ ಕೊಡುತ್ತೀರಾ ?

ಅಧ್ಯಕ್ಷರು. —ಆಶಾದಾಯಕವಾದ ಉತ್ತರ ಕೊಡಿ.

ಶ್ರೀ ಹೆಚ್. ಡಿ. ದೇವೇಗೌಡ.—ಆಶಾದಾಯಕವಾದ ಉತ್ತರ ಕೊಡಬೇಕು ಎಂದೇ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದೆ. ಇದಕ್ಕೆ ಇತಿಹಾಸ ಇದೆ ಇದು ಮಂಜೂರಾತಿ ಆಗುವುದಕ್ಕೆ ಮುಂಚೆ ೧೯೭೯ ರಲ್ಲಿ ಕೆಲಸ ಶುರುವಾಡಿ ೧ ಲಕ್ಷ ೩೦ ಸಾವಿರ ಖರ್ಚುಮಾಡಿ ಅದು ಆಮೇಲೆ ನಿಂತುಹೋಗಿದೆ, ವರ್ಕ್ ಅಬಾಂಡನ್ ಮಾಡಬೇಕು ಎನ್ನುವ ಸ್ಟೇಜ್‌ಗೆ ಬಂದಾಗ ಸದನದಲ್ಲಿ ಅವರೇ ಒತ್ತಾಯ ಮಾಡಿದ ಮೇಲೆ ಸ್ಥಳ ಪರಿಶೀಲನೆ ಮಾಡಿ ೬೪ ಎಕರೆ ಮುಳುಗಡೆಯಾಗತಕ್ಕಂಥ ಫಾರೆಸ್ಟ್ ಲ್ಯಾಂಡ್‌ಗೆ ಪರ್ಯಾಯವಾಗಿ ರೆವಿನ್ಯೂ ಸೀಡಗಿ ಲ್ಯಾಂಡ್ ಕೊಡುತ್ತೇವೆ ಎಂದು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಹೇಳಿ, ಅಲ್ಲಿ ಆಲ್ಟರ್ನೇಟೀವಾಗಿ ಫಾರೆಸ್ಟ್ ಬೆಳಿಸಿ ಎಂದು ಹೇಳಿ. ಇಷ್ಟೆಲ್ಲಾ ಮಾಡಿ ಎಷ್ಟೆಷ್ಟು ಕ್ರಮ ತೆಗೆದುಕೊಳ್ಳಬೇಕೋ ಅಷ್ಟನ್ನು ಮಾಡಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ವರ್ಷವಾದರೂ ಅದನ್ನು ಪ್ರಾರಂಭ ಮಾಡುವುದಕ್ಕೆ ಪೂರ್ಣ ಪ್ರಯತ್ನ ತಮ್ಮ ಕಡೆಯಿಂದ ಆಗುತ್ತದೆಯೇ ಸ್ವಾಮಿ ?

ಶ್ರೀ ಹೆಚ್. ಡಿ ದೇವೇಗೌಡ —ಕೇಂದ್ರ ಸರ್ಕಾರದಿಂದ ಫಾರೆಸ್ಟ್ ಲ್ಯಾಂಡ್ ಮುಳುಗಡೆಯಾಗುವುದಕ್ಕೆ ಪರವಾನಗಿಬೇಕು. ಅದಕ್ಕೋಸ್ಕರ ನಾವು ಬೇರೆ ಆಲ್ಟರ್ನೇಟೀವ್ ಲ್ಯಾಂಡ್ ಕೊಡುತ್ತೇವೆ. ಹಣ ಕೊಡುತ್ತೇವೆ ಎಂದೆಲ್ಲಾ ಹೇಳಿದ್ದೇವೆ ಕೇಂದ್ರ ಸರ್ಕಾರದಿಂದ ಸಮ್ಮತಿ ಸಿಗಬಹುದು ಎಂದು ಆಸೆ ಇಟ್ಟು ಕೊಂಡಿದ್ದೇವೆ, ಸಿಕ್ಕಿದ ನಂತರ ಪ್ರಾರಂಭ ಮಾಡುತ್ತೇವೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಗಂಗಾಕಲ್ಯಾಣ ಯೋಜನೆ ಬಗ್ಗೆ

೫೧. ಶ್ರೀ ಗೋಪಾಲಮೂಕಾಂದ ಕಾನಡೆ (ಸಿರ್ಸಿ) ಮಾನ್ಯ ಲೋಕೋಪಯೋಗಿ, ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಮಂಜೂರಾದ ಯೋಜನೆಗಳಾವುವು ?

ಆ) ಸಿರ್ಸಿ ಸಿದ್ದಾಪುರ ತಾಲ್ಲೂಕಿನಲ್ಲಿ ಮಂಜೂರಾದ ಯೋಜನೆಗಳಾವುವು ?

ಇ) ಸದರಿ ಯೋಜನೆಗಳ ಮಂಜೂರಾತಿ ಬಗ್ಗೆ ತಾಲ್ಲೂಕಿನ ಜನತೆಯಿಂದ ಬೇಡಿಕೆಗಳೇನಾದರೂ ಸರ್ಕಾರದವರಿಗೆ ಬಂದಿವೆಯೇ ?

ಈ) ಹಾಗಿದ್ದಲ್ಲಿ, ಸದರಿ ಯೋಜನೆಯನ್ನು ಅನುಷ್ಠಾನಕ್ಕೆ ತರದೇ ಇರಲು ಕಾರಣಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಮಂಜೂರಾದ ಯೋಜನೆಗಳು ೩೦. ವಿವರಗಳನ್ನು ಲಗತ್ತಿಸಿದೆ (ಪಟ್ಟಿ–೧)

ಆ) ಸಿರ್ಸಿ ಮತ್ತು ಸಿದ್ದಾಪುರ ತಾಲ್ಲೂಕಿನಲ್ಲಿ ೧೧ ಯೋಜನೆಗಳು ಮಂಜೂರಾಗಿದೆ. ಪಟ್ಟಿ–೨ರಲ್ಲಿ ವಿವರಿಸಲಾಗಿದೆ.

ಇ) ಹೌದು